O.S .No.21/2019
PW-1

ದಿನಾಂಕ: 08-06-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲು 1 ಮತ್ತು 3 ನೇ ಪ್ರತಿವಾದಿ ಪರ ಶ್ರೀ ವಿ.ಕೆ. ವಕೀಲರಿಂದ**

ದಾವೆಯನ್ನು ದಾವೆಯ ಆಸ್ತಿ ನಮ್ಮದು ಎಂದು ಘೋಷಣೆ ಮಾಡುವಂತೆ ಕೋರಿ ಹೂಡಿರುತ್ತೇನೆ. ದಾವೆಯನ್ನು ಪ್ರತಿವಾದಿ 1 ರಿಂದ 3 ರವರ ಮೇಲೆ ಹೂಡಿರುತ್ತೇನೆ. ನ್ಯಾಯಾಲಯಕ್ಕೆ ಹಾಜರುಪಡಿಸಿದ ದಾಖಲೆಗಳನ್ನು ಹೊರತು ಪಡಿಸಿ ಬೇರೆ ದಾಖಲೆಗಳು ನಿಮ್ಮ ಬಳಿ ಇದೆಯೇ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ.

ದಾವಾ ಆಸ್ತಿ ಸ.ನಂ.72/11 ಆಗಿರುತ್ತದೆ. ದಾವಾ ಆಸ್ತಿ ಮೂಲತಃ ಚಿಕ್ಕತಮ್ಮನಾಯಕ ಹಾಗೂ ದೊಡ್ಡತಮ್ಮನಾಯಕನಿಗೆ ಸೇರಿದ್ದಾಗಿರುತ್ತದೆ. ದಾವಾ ಆಸ್ತಿ ಚಿಕ್ಕತಮ್ಮನಾಯಕ ಹಾಗೂ ದೊಡ್ಡತಮ್ಮನಾಯಕನಿಗೆ ಸೇರಿದ್ದು ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಮೂಲತಃ ಏಳಮೂಗನಾಯಕ ರವರಿಗೆ ಸೇರಿದ್ದು ಎಂದರೆ ಸರಿ. ಸದರಿಯವರಿಗೆ ಕೊಂಡನಾಯಕ ಮತ್ತು ಕಾಂತನಾಯಕ ಎಂದು ಇಬ್ಬರು ಮಕ್ಕಳು ಎಂದರೆ ಸರಿ. ಕೊಂಡನಾಯಕನಿಗೆ ಸಣ್ಣಪ್ಪನಾಯಕ ಎಂಬ ಒಬ್ಬನೇ ಮಗ ಎಂದರೆ ಸರಿ. ಸಣ್ಣಪ್ಪನಾಯಕನಿಗೆ ಎಷ್ಟು ಜನ ಮಕ್ಕಳು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಕಾಂತನಾಯಕನಿಗೆ ಎಷ್ಟು ಜನ ಮಕ್ಕಳು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ.

ಕಾಂತನಾಯಕನಿಗೆ ಚಿಕ್ಕತಮ್ಮನಾಯಕ ಹಾಗೂ ದೊಡ್ಡತಮ್ಮನಾಯಕ ಎಂಬ ಇಬ್ಬರು ಮಕ್ಕಳು ಎಂದರೆ ಸರಿ. ದೊಡ್ಡತಮ್ಮನಾಯಕನಿಗೆ 1 ನೇ ಪ್ರತಿವಾದಿ ಮಗ ಎಂದರೆ ಸರಿ. ಚಿಕ್ಕತಮ್ಮನಾಯಕನಿಗೆ 2 ನೇ ಪ್ರತಿವಾದಿ, ಸೋಮಣ್ಣನಾಯಕ, ನಾಗರಾಜನಾಯಕ ಎಂಬ ಮೂರು ಜನ ಮಕ್ಕಳು. ದಾವಾ ಆಸ್ತಿ ಮೂಲತಃ ಎಳಮೂಗನಾಯಕರಿಗೆ ಸೇರಿದ್ದರಿಂದ ಅವರ ಮಕ್ಕಳು, ಮೊಮ್ಮಕ್ಕಳಾದ ಪ್ರತಿವಾದಿಗಳ ಹೆಸರಿಗೆ ಪಹಣಿ ಬರುತ್ತಿದೆ ಎಂದರೆ ಸರಿ.

ಎಳಮೂಗನಾಯಕ ರವರು ಬದುಕಿದ್ದಾಗ ದಾವಾ ಆಸ್ತಿಯನ್ನು ಉಳುಮೆ ಮಾಡುತ್ತಿದ್ದರು ಎಂದರೆ ಸಾಕ್ಷಿ ಕರೀನಾಯಕ ಉಳುಮೆ ಮಾಡುತ್ತಿದ್ದ ಎಂದು ಹೇಳುತ್ತಾರೆ. ಈಗಲೂ ಪ್ರತಿವಾದಿಗಳೇ ದಾವಾ ಆಸ್ತಿಯನ್ನು ಉಳುಮೆ ಮಾಡುತ್ತಿದ್ದಾರೆಂದರೆ ಸರಿಯಲ್ಲ. ಸಾಕ್ಷಿ ನಾನು ಮಾಡುತ್ತಿದ್ದೇನೆ ಎಂದು ಹೇಳುತ್ತಾರೆ.

ದಾವಾ ಆಸ್ತಿ ಪ್ರತಿವಾದಿಗಳ ಪಿತ್ರಾರ್ಜಿತ ಸ್ವತ್ತು ಎಂದರೆ ಸಾಕ್ಷಿ ಪ್ರತಿವಾದಿಗಳ ತಂದೆಯಿಂದ ನನ್ನ ತಂದೆಗೆ ನೊಂದಾಯಿತ ದಾಖಲೆ ಮೂಲಕ ಬಂದಿದೆ ಎಂದು ಹೇಳುತ್ತಾರೆ. ಈಗಲೂ ಸಹ ಪ್ರತಿವಾದಿಗಳೇ ಸ್ವಾಧೀನ ಇದ್ದು, ಅವರೇ ಕಂದಾಯವನ್ನು ಪಾವತಿ ಮಾಡುತ್ತಿದ್ದಾರೆಂದರೆ ಸರಿಯಲ್ಲ. ನಿಮಗೂ, ದಾವಾ ಆಸ್ತಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ, ಆಲಿಸಿ ಅನುಮತಿಸಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.